# ಹಕ್ಕಿಗೂ ಸಂಗೀತ ಪಾಠ..?

ಅರೆ! ಇದೇನು ಈ ಪಕ್ಷಿ ಹೆಡ್‌ಫೋನ್ ಹಾಕಿಕೊಂಡು ಸಂಗೀತ ಕೇಳುತ್ತಿದೆಯೇ? ಹೌದು. ನಿಮ್ಮ ಊಹೆ ಸರಿ. ಆದರೆ ಇದು ತಾನಾಗಿಯೇ ತನ್ನ ತಲೆಗೆ ಹೆಡ್‌ಫೋನ್ ಸಿಕ್ಕಿಸಿಕೊಂಡಿಲ್ಲ. ಇದಕ್ಕೆ ಸಂಗೀತ ಕೇಳುವ ಇರಾದೆಯೂ ಇಲ್ಲ. ಇದು ಈಗ ಒಬ್ಬ ವಿಜ್ಞಾನಿಯ ಪ್ರಯೋಗಕ್ಕೆ ತನ್ನ ತಲೆಯನ್ನು ಕೊಟ್ಟಿದೆ. ಕಿವಿಯನ್ನೂ ಕೂಡ! ಗುಬ್ಬಿಯ ಗಾತ್ರದ ಈ ಹಕ್ಕಿಯ ಹೆಸರು ಬೆಂಗಾಲಿ ಫಿಂಚ್.

ಈ ಫಿಂಚ್‌ಗೆ ಸಂಗೀತದ ಪಿಚ್ ಕಲಿಸಲು ಹೊರಟ ಕ್ಯಾಲಿಫೋರ್ನಿಯಾದ ಈ ವಿಜ್ಞಾನಿಯ ಹೆಸರು ಸೊಬರ್. ಈ ಪಕ್ಷಿಯ ತಲೆಗೆ ಸೂಕ್ತವಾಗುವ ಹೆಡ್‌ಫೋನ್ ತಯಾರಿಸಿ ತೊಡಿಸಿದ್ದು ಆತನೇ. ಈ ಹಕ್ಕಿಯ ನೈಸರ್ಗಿಕ ಹಾಡಿಗೆ ಸಂಗೀತದ ಮಾಧುರ್ಯ ಸೇರುವಂತೆ ಮಾಡುವುದೇ ಆತನ ಉದ್ದೇಶ. ಇದರ ಧ್ವನಿಯಲ್ಲಿರುವ ಕರ್ಕಶವನ್ನು ತೆಗೆದು ಹಾಕುವುದು ಆತನ ಇನ್ನೊಂದು ಉದ್ದೇಶ.

ಮಗು ತನ್ನ ತಂದೆ–ತಾಯಿ–ಕುಟುಂಬದವರ ಧ್ವನಿಯನ್ನು ಅನುಕರಿಸಿ ಮಾತು ಕಲಿಯುವುದಿಲ್ಲವೇ? ಹಾಗೆಯೇ, ಮರಿ ಹಕ್ಕಿ ತನ್ನ ತಂದೆ–ತಾಯಿಯ ಧ್ವನಿಯನ್ನು ಕೇಳಿ ಹಾಡಲು ಆರಂಭಿಸುತ್ತದೆ. ಮೊದಮೊದಲು ತೊದಲಿದರೂ ಬರಬರುತ್ತ ದೊಡ್ಡ ಪಕ್ಷಿಯಂತೆಯೇ ಹಾಡಲಾರಂಭಿಸುತ್ತದೆ. ಅದಕ್ಕೆ ಇನ್ನಷ್ಟು ಬೇರೆ ಬೇರೆ ಸ್ವರ–ಧ್ವನಿಗಳನ್ನು ಕೇಳಿಸಿದರೆ ಅದನ್ನೂ ಅದು ಅನುಕರಿಸಬಲ್ಲುದೇ ಎಂಬುದನ್ನು ಪರೀಕ್ಷಿಸುವುದೇ ಈ ಪ್ರಯೋಗದ ಉದ್ದೇಶ. ಅದು ಆಗಲೇ ಬಹಳಷ್ಟು ಸಫಲವಾಗಿದೆ ಎನ್ನುತ್ತಾರೆ ವಿಜ್ಞಾನಿ ಸೊಬರ್.

ಪ್ರಕೃತಿಯಲ್ಲಿನ ಅಸ್ಪಷ್ಟ ಸ್ವರಗಳನ್ನು ಪಕ್ಷಿಗಳು ಗ್ರಹಿಸಲಾರವು. ಸ್ಪಷ್ಟವಾದ ಹಾಗೂ ನಿರ್ದಿಷ್ಟವಾದ ಸ್ವರಗಳನ್ನು ಪಕ್ಷಿಗಳ ಕಿವಿಗೆ ತಲುಪಿಸುವುದೇ ಈ ಹೆಡ್‌ಫೋನಿನ ಉದ್ದೇಶ. ಇದು ಅತ್ಯಂತ ಹಗುರವಾದ ಸಣ್ಣ ಪಕ್ಷಿ ಸುಲಭವಾಗಿ ಧರಿಸಬಲ್ಲಂತಹ ಹೆಡ್‌ಫೋನ್. ಪಕ್ಷಿಯ ಮೆದುಳಿನ ಸಾಮರ್ಥ್ಯ ಹಾಗೂ ಅದರ ಧ್ವನಿ ಪೆಟ್ಟಿಗೆಯ ಶಕ್ತಿ, ಎಂತಹ ಸ್ವರೋನ್ನತಿಗೆ ಅವಕಾಶ ಕಲ್ಪಿಸಬಲ್ಲದು ಎಂಬದನ್ನು ಲೆಕ್ಕಹಾಕಿ, ಅದರ ಕಿವಿಗಳಿಗೆ ಕೇಳಿಸಲಾಯಿತು. ಈಗ ಆ ಹಕ್ಕಿಯೂ ಪ್ರತಿಸ್ಪಂದಿಸಿ ಭಿನ್ನವಾದ, ಮೊದಲಿಗಿಂತ ಮಧುರವಾದ ಸ್ವರದಿಂದ ಹಾಡಲಾರಂಭಿಸಿದೆ. ಇಂಥ ಪ್ರಯೋಗಗಳು ಮನುಷ್ಯರಲ್ಲಿನ ಸಂಗೀತ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸಲು ಸಹಾಯಕವಾಗಬಲ್ಲವು ಎನ್ನುತ್ತಾರೆ ಈ ಪ್ರಯೋಗದಲ್ಲಿ ತೊಡಗಿದ ವಿಜ್ಞಾನಿಗಳು. ಮುಂದೊಂದು ದಿನ ಮನುಷ್ಯರ ಮೇಲೆ ಇಂಥ ಪ್ರಯೋಗಗಳನ್ನು ಮಾಡಿ ಎಲ್ಲರೂ ಸಂಗೀತಗಾರರಾಗುವಂತೆ ಮಾಡಬಹುದೇನೋ?

■ ಸುಭಾಸ ಯಾದವಾಡ



ಹೆಡ್‌ಫೋನ್ ಧರಿಸಿದ ಬೆಂಗಾಲಿ ಫಿಂಚ್ ಪಕ್ಷಿ